



# ನಾಲ್ಕು ಭಾಷೆಯಲ್ಲಿ ಕನ್ನಡದ ಮಾಯಾ

## ಶ್ವೇತಾ ವಿ.ಹೆಗಡೆ

ಉದಯದ 'ಮಾಯಾ'ದ ದರ್ಶಿನಿ

★ *ನಿಮ್ಮ ವೃತ್ತಿ ಬದಲಾಗಿದ್ದು ಹೇಗೆ?*

ಮೂಲತಃ ಭರತನಾಟ್ಯ ಕಾಲಾವಿದೆ. 24 ವರ್ಷಗಳ ಕಾಲ ಅದೇ ನನಗೆ ವೃತ್ತಿ ಆಗಿತ್ತು. 'ಸರಯೂ' ಮೂಲಕ ನಟನೆಗೆ ಪ್ರವೇಶ ಮಾಡಿದೆ. ಅದಾದ ಮೇಲೆ ಕೆಲವು ಕಿರುಚಿತ್ರಗಳಲ್ಲಿ ನಟಿಸುತ್ತಿದ್ದಂತೆ ಅಭಿನಯ ನನ್ನೊಳಗೆ ಸಮ್ಮಿಳಿತವಾಯಿತು. ಈಗ 'ಮಾಯಾ' ಮಾಡುತ್ತಿದ್ದೇನೆ.

★ *'ಮಾಯಾ'ದ ಮಂತ್ರಗಾರಿಕೆ ಏನು?*

ಕಥೆಯ ಮೂಲ ಕಲ್ಪನೆ. ಭಾವ ವಿಸ್ತಾರಗೊಳಿಸುತ್ತದೆ. ಬೇರೆ ಧಾರಾವಾಹಿಗಳಂತೆ ಕಾದಾಟ, ಮತ್ಸರ ಪ್ರಾಧಾನ್ಯತೆ ಪಡೆದಿಲ್ಲ. ಮನೆ ಮನೆಯ ಕಥೆಗಿಂತಲೂ ಇಂತಹ ಅದ್ದೂರಿ ಧಾರಾವಾಹಿಯಲ್ಲಿ ನಟಿಸುತ್ತಿರುವುದು ತುಂಬಾ ಖುಷಿಯ ಸಂಗತಿ. ಕಥೆ ಕೂಡ ವೇಗವಾಗಿ ಸಾಗುತ್ತದೆ. ಪ್ರೇಕ್ಷಕರಲ್ಲಿಯೂ ಕಲ್ಪನಾ ಸಾಮರ್ಥ್ಯವನ್ನು ವಿಸ್ತರಿಸುವುದರಿಂದ ಇದು ಅವರಿಗೆ ಇಷ್ಟ ಆಗುತ್ತದೆ ಎನ್ನುವುದು ನನ್ನ ನಂಬಿಕೆ. ಮಾಯಯಾ ಏಕಕಾಲಕ್ಕೆ ನಾಲ್ಕು ಭಾಷೆಗಳಲ್ಲಿ (ತಮಿಳು, ತೆಲುಗು, ಮಲೆಯಾಳಂ, ಕನ್ನಡ) ಪ್ರಸಾರವಾಗುತ್ತಿದೆ. ಎರಡು ಸಾವಿರ ವರ್ಷಗಳ ಹಿಂದಿನ ಜನ್ಮಾಂತರ ಸಂಬಂಧದ ಜೊತೆ ಕಥೆ ಬೆಸೆದುಕೊಂಡಿದೆ. ಇದರಲ್ಲಿ ಇಬ್ಬರು ನಾಯಕಿಯರು ಬರುತ್ತಾರೆ. ಒಬ್ಬಳದು ನೆಗೆಟಿವ್ ಪಾತ್ರವಾದರೆ, ನನ್ನದು ಪಾಸಿಟಿವ್ ಪಾತ್ರ. ದೈವ ಶಕ್ತಿ ಮತ್ತು ದುಷ್ಟ ಶಕ್ತಿಯ ನಡುವಿನ ಸಂಘರ್ಷ ನಡೆಯುತ್ತದೆ. ಸಿನಿಮಾ ಮಾದರಿಯಲ್ಲಿ ಗ್ರಾಫಿಕ್ ಮಾಡಿರುವುದು ಧಾರಾವಾಹಿಯ ದೊಡ್ಡ ಆಕರ್ಷಣೆ. ನಿತ್ಯದ ಕಂತಿನಲ್ಲಿ ಏಳೆಂಟು ನಿಮಿಷ ಗ್ರಾಫಿಕ್ ಇರುತ್ತದೆ.

★ *ಡಾನ್ಸ್ ವೃತ್ತಿಯಾಗಿ ಹೇಗೆನಿಸಿತ್ತು?*

ಈಗಲೂ ನೃತ್ಯವನ್ನು ಮಾಡುತ್ತೇನೆ. ನಾನು ವಿಶೇಷವಾಗಿ ಭಾರತೀಯ ಪಾರಂಪರಿಕ ನೃತ್ಯಪಟು. ಈ ಕ್ಷೇತ್ರದಲ್ಲಿ ಅಭ್ಯಾಸ ತುಂಬಾ ಕಠಿಣವಾಗಿರುತ್ತದೆ. ಆದರೆ ಅದರಿಂದ ಹೇಳಿಕೊಳ್ಳುವಂತಹ ಆರ್ಥಿಕ ಬೆಂಬಲ ಇರುವುದಿಲ್ಲ. ಅದರಿಂದ ಪ್ರಾಪ್ತವಾಗುವ ಖುಷಿಗೆ ಬೆಲೆ ಕಟ್ಟಲು ಆಗಲ್ಲ. ಯಾವುದೋ ಒಂದು ಕಾರ್ಯಕ್ರಮ ನೀಡಿದ ಬಳಿಕ ನೃತ್ಯದ ಅಭಿರುಚಿಯ ಸಹೃದಯರಿಂದ ವ್ಯಕ್ತವಾಗುವ ಮೆಚ್ಚುಗೆ ಸಾರ್ಥಕ ಭಾವವನ್ನು ತುಂಬುತ್ತದೆ. ಒಂದು ಕಾರ್ಯಕ್ರಮ ನೀಡಲು ಸಾಕಷ್ಟು ದಿನಗಳ ತಾಲೀಮು ಅದರ ಹಿಂದಿರುತ್ತದೆ. ನಿತ್ಯ ಐದಾರು ಗಂಟೆ ಸತತ ಅಭ್ಯಾಸದಿಂದ ಮಾತ್ರ ಕಾರ್ಯಕ್ರಮ ನೀಡಲು ಸಾಧ್ಯವಾಗುತ್ತದೆ. ಇದರಿಂದ ದೇಶ ಸುತ್ತಲು ಸಹಾಯವಾಗಿದೆ.

★ *ತೆರೆಯ ಜನಪ್ರಿಯತೆಯಿಂದ ನಿಮ್ಮಲ್ಲಾದ ಬದಲಾವಣೆ ಗುರುತಿಸುವುದಾದರೆ...*

ಅಂತಹ ಜನಪ್ರಿಯ ಗೀಳು ನನ್ನ ತಲೆಗೆ ಇನ್ನೂ ಏರಿಲ್ಲ, ಏರುವುದೂ ಇಲ್ಲ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಇರಬೇಕು ಎನ್ನುವ ಪ್ರಜ್ಞೆಯನ್ನು ರೂಢಿಸಿಕೊಂಡಿದ್ದೇನೆ. ಎಲ್ಲಾದರೂ ಜನ ಗುರುತಿಸಿ ಅವರ ಅಭಿಪ್ರಾಯವನ್ನು ವಿನಿಮಯ ಮಾಡಿಕೊಂಡಾಗ ಸಂತೋಷ ಆಗುತ್ತದೆ. ಉಳಿದಂತೆ ಎಂದಿನ ಸಾಮಾನ್ಯ ಬದುಕೇ ನನ್ನದು.

★ ಅಭಿಮಾನಿಗಳ ಪ್ರೀತಿಯ ಕೋರಿಕೆಗಳನ್ನು ಹೇಗೆ ನಿಭಾಯಿಸುತ್ತೀರಿ?

ಸಾರ್ವಜನಿಕ ಬದುಕಿನಲ್ಲಿ ಅಂತಹದ್ದು ಸಾಮಾನ್ಯ. ಫೇಸ್‌ಬುಕ್‌ನಲ್ಲಿ ಅಂತಹ ಹತ್ತಾರು ಕೋರಿಕೆಗಳು ಬರುತ್ತವೆ. ಅವರ ಮುಗ್ಧತೆ ನನಗೆ ಅರ್ಥ ಆಗುತ್ತದೆ. ಹಾಗಾಗಿ ಅವರ ಅಭಿಮಾನಕ್ಕೆ ನೋವಾಗದಂತೆ ಪರಿಹರಿಸಲು ರಾಮಬಾಣ ನನ್ನ ಬಳಿ ಇದೆ. ಅದು ತುಂಬಾ ಜನರಿಗೆ ಗೊತ್ತಿಲ್ಲದ ಕಾರಣ ಪ್ರೀತಿಸುವ ಬಯಕೆ ವ್ಯಕ್ತಪಡಿಸುತ್ತಾರೆ. ನನಗೆ ಮದುವೆ ಆಗಿದೆ. ನಾನೂ ಪ್ರೀತಿಸಿ ಮದುವೆ ಆಗಿದ್ದೇನೆ. ನಮ್ಮ ಸಂಸಾರ ಆನಂದದಿಂದ ತುಂಬಾ ಚೆನ್ನಾಗಿದೆ. ನಿಮ್ಮ ಅಭಿಮಾನ ಪ್ರೀತಿ ಹೀಗೆ ಇರಲಿ. ನಿಮ್ಮ ಅಭಿಮಾನಕ್ಕೆ ಚಿರ ಋಣಿ ಎನ್ನುತ್ತೇನೆ.

■ **ರಾಘವೇಂದ್ರ**